**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

==================================== ===================

**ಸಂ: ಸಿ4[6]ರಜೆ ಆದೇಶ/01/2018–19** **ದಿನಾಂಕ: 29.01.2019**

## : : ಜ್ಞಾಪನ : :

ವಿಷಯ: 2019–20ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಶೈಕ್ಷಣಿಕ ಅವಧಿಗಳು ಮತ್ತು ರಜಾ ಅವಧಿಗಳನ್ನು ನಿಗದಿಪಡಿಸುವ ಬಗ್ಗೆ.

**********

ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2019–20ನೇ ಸಾಲಿನ ಶೈಕ್ಷಣಿಕ ವರ್ಷದ ಶೈಕ್ಷಣಿಕ ಅವಧಿ, ಮಧ್ಯಂತರ ರಜೆ ಹಾಗೂ ಬೇಸಿಗೆ ರಜೆಗಳನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ನಿಗದಿಪಡಿಸಿ ಆದೇಶಿಸಿದೆ.

| ಶಾಲಾ ದಿನಗಳ ವಿವರ | |
|---|---|
| **ದಿನಾಂಕ: 29–05–2019 ರಿಂದ 05–10–2019** | **ಮೊದಲನೇ ಅವಧಿ** |
| **ದಿನಾಂಕ: 21–10–2019 ರಿಂದ 11–04–2020** | **ಎರಡನೇ ಅವಧಿ** |
| **ರಜಾ ಅವಧಿಗಳು** | |
| **ದಿನಾಂಕ: 06–10–2019 ರಿಂದ 20–10–2019** | **ಮಧ್ಯಂತರ ರಜೆ** |
| **ದಿನಾಂಕ: 12–04–2020 ರಿಂದ 24–05–2020** | **ಬೇಸಿಗೆ ರಜೆ** |

**2019–2020 ಶೈಕ್ಷಣಿಕ ಸಾಲಿನ ರಜೆ ಹಾಗೂ ಬೋಧನಾ ದಿನಗಳು**

| ಕ್ರಮ ಸಂ | ತಿಂಗಳು | ಶೈಕ್ಷಣಿಕ ವರ್ಷದ ಒಟ್ಟು ದಿನಗಳು | ಒಟ್ಟು ರಜೆಗಳು | ಲಭ್ಯವಿರುವ ಶಾಲಾ ದಿನಗಳು |
|---|---|---|---|---|
| 01. | ಮೇ 2019 | 03 | 00 | 03 |
| 02. | ಜೂನ್ 2019 | 30 | 06 | 24 |
| 03. | ಜುಲೈ 2019 | 31 | 04 | 27 |
| 04. | ಆಗಸ್ಟ್ 2019 | 31 | 05 | 26 |
| 05. | ಸೆಪ್ಟೆಂಬರ್ 2019 | 30 | 08 | 22 |
| 06 | ಅಕ್ಟೋಬರ್ 2019 | 31 | 15 | 16 |
| 07. | ನವೆಂಬರ್ 2019 | 30 | 05 | 25 |
| 08. | ಡಿಸೆಂಬರ್ 2019 | 31 | 06 | 25 |
| 09. | ಜನವರಿ 2020 | 31 | 05 | 26 |
| 10. | ಫೆಬ್ರವರಿ 2020 | 29 | 04 | 25 |
| 11. | ಮಾರ್ಚ್ 2020 | 31 | 06 | 25 |
| 12. | ಏಪ್ರಿಲ್ 2020 | 11 | 01 | 10 |
| | ಒಟ್ಟು | 318 | 65 | 254 |
| | ವಿವೇಚನಾ ರಜೆಗಳು | | | 04 |
| | ಒಟ್ಟು ಬೋಧನಾ ದಿನಗಳು | | | 250 |

1. ದಿನಾಂಕ:11.04.2020 ರಿಂದ ಬೇಸಿಗೆ ರಜೆಯನ್ನು ನೀಡಿದ್ದರೂ ಸಹ ದಿನಾಂಕ:14.04.2020ರಂದು ಬರುವ ಡಾ॥ ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಶಾಲಾ ಮುಖ್ಯಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ಸದಸ್ಯರು ಸೇರಿ ವಿದ್ಯಾರ್ಥಿಗಳೊಂದಿಗೆ ಕಡ್ಡಾಯವಾಗಿ ಆಚರಿಸಬೇಕು.
2. ಕ್ರಿಸ್‌ಮಸ್ ರಜೆ ಬೇಡಿಕೆಯನ್ನು ಸಂಬಂಧಿಸಿದ ಸಂಸ್ಥೆಗಳು ಆಯಾ ವ್ಯಾಪ್ತಿಯ ಉಪನಿರ್ದೇಶಕರುಗಳಿಗೆ ಸಲ್ಲಿಸಿದಲ್ಲಿ, ಈ ಬಗ್ಗೆ ಆಯಾ ಉಪನಿರ್ದೇಶಕರುಗಳು ಪರಿಶೀಲಿಸಿ, ಡಿಸೆಂಬರ್ ಮಾಹೆಯಲ್ಲಿ ನೀಡುವ ಕ್ರಿಸ್‌ಮಸ್ ರಜಾ ಅವಧಿಯನ್ನು ಅಕ್ಟೋಬರ್ ಮಾಹೆಯ ಮಧ್ಯಂತರ ರಜೆಯಲ್ಲಿ ಕಡಿತಗೊಳಿಸಿ ಸರಿದೂಗಿಸಿಕೊಳ್ಳತಕ್ಕದ್ದು.
3. ರಾಜ್ಯ ಮಟ್ಟದ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ಮೇಳ ಕಾರ್ಯಕ್ರಮಗಳನ್ನು ಆಯೋಜಿಸುವ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ ಉಪನಿರ್ದೇಶಕರುಗಳು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಮಧ್ಯಂತರ ರಜಾ ಅವಧಿಯನ್ನು ಅವಶ್ಯಕತೆಗನುಗುಣವಾಗಿ ಮಾರ್ಪಡಿಸಿಕೊಳ್ಳುವ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಶೈಕ್ಷಣಿಕ ಕರ್ತವ್ಯದ ಅವಧಿಗಳ ಕೊರತೆ ಬಾರದ ರೀತ್ಯಾ ಕ್ರಮ ಮಾಡತಕ್ಕದ್ದು.
4. ನಿಗದಿಪಡಿಸಿದ ಶೈಕ್ಷಣಿಕ ಶಾಲಾ ಕರ್ತವ್ಯದ ಅವಧಿಗಳು ಕಡಿಮೆಯಾಗದಂತೆ, ಮುಷ್ಕರ ಇನ್ನಿತರೆ ಅನಿರೀಕ್ಷಿತ ಕಾರಣಗಳಿಂದಾಗಿ ರಜೆ ಘೋಷಣೆಯಾದಲ್ಲಿ ಆ ಅವಧಿಯ ಶಾಲಾ ಕರ್ತವ್ಯದ ದಿನಗಳನ್ನು ಮುಂದಿನ ರಜಾ ದಿನಗಳಲ್ಲಿ ಪೂರ್ಣ ದಿನ ಶಾಲೆಗಳನ್ನು ನಡೆಸಿ ಶಾಲಾ ಕರ್ತವ್ಯದ ದಿನಗಳನ್ನು ಸರಿದೂಗಿಸಿಕೊಳ್ಳಲು ಉಪನಿರ್ದೇಶಕರು ಕ್ರಮ ವಹಿಸುವುದು.

ಸೂಚನೆ:– ಪರೀಕ್ಷಾ ದಿನಗಳನ್ನು ಕೂಡಾ ಶಾಲಾ ದಿನಗಳೆಂದು ಪರಿಗಣಿಸುವುದು.

(ಡಾ॥ ಪಿ.ಸಿ. ಜಾಫರ್, ಭಾ.ಆ.ಸೇ)
ಆಯುಕ್ತರು

**ಇವರಿಗೆ:–**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ/ ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಮಾನ್ಯ ಘನತೆವೆತ್ತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು ರವರಿಗೆ
2. ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಕೊಠಡಿ ಸಂಖ್ಯೆ: 262/262ಎ, ವಿಧಾನಸೌಧ, 2ನೇ ಮಹಡಿ, ಬೆಂಗಳೂರು–01ರವರಿಗೆ.
3. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ರವರಿಗೆ.
4. ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ/ಆರ್.ಎಂ.ಎಸ್.ಎ., ನೃಪತುಂಗ ರಸ್ತೆ, ಬೆಂಗಳೂರುರವರಿಗೆ.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಗೆ.
8. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರುರವರಿಗೆ.
9. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಂಶುಪಾಲರ ಮತ್ತು ಪ್ರೌಢಶಾಲಾ ಮುಖ್ಯಶಿಕ್ಷಕರ ಸಂಘ, ಬೆಂಗಳೂರು.
10. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ, ಬೆಂಗಳೂರುರವರಿಗೆ.
11. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.
12. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
13. ಕಛೇರಿ ಪ್ರತಿ.